

## ಕ್ಯಾರೆಟ್ ಓಟ್ಸ್ ವಾಂಗಿಭಾತ್

ಏನೇನು ಬೇಕು?

ಕ್ಯಾರೆಟ್ ಎರಡು/ ಹಸಿ ಬಟಾಣಿ ಎರಡು ಚಮಚ
ಓಟ್ಸ್ ಒಂದು ಕಪ್/ ಒಣ ಕೊಬ್ಬರಿ ತುರಿ ಸ್ವಲ್ಪ
ವಾಂಗಿಭಾತ್ ಪುಡಿ ಒಂದು ಚಮಚ/ ಉಪ್ಪು ರುಚಿಗೆ
ಒಗ್ಗರಣೆಗೆ ಎಣ್ಣೆ, ಸಾಸಿವೆ, ಕರಿಬೇವು

ಮಾಡೋದು ಹೇಗೆ?

ಓಟ್ಸ್ ಅನ್ನು ಸ್ವಲ್ಪ ಹುರಿದುಕೊಂಡು ತೆಗೆದಿಡಿ. ಅದೇ ಬಾಣಲೆಗೆ ಎಣ್ಣೆಹಾಕಿ ಸಾಸಿವೆ ಕರಿಬೇವಿನ ಒಗ್ಗರಣೆಗೆ ಸಣ್ಣಗೆ ಹೆಚ್ಚಿದ ಕ್ಯಾರೆಟ್ ಮತ್ತು ಬಟಾಣಿ ಸೇರಿಸಿ ಹುರಿದು ಎರಡು ಕಪ್ ನೀರು ,ಉಪ್ಪು ಹಾಕಿ ಬೇಯಲು ಇಡಿ. ಅದಕ್ಕೆ ವಾಂಗಿಭಾತ್ ಪುಡಿ ಮತ್ತು ಕೊಬ್ಬರಿ ತುರಿ ಸೇರಿಸಿ. ಹುರಿದ ಓಟ್ಸ್ ಅನ್ನು ಸೇರಿಸಿ ಉರಿ ಕಡಿಮೆ ಮಾಡಿ. ಓಟ್ಸ್ ಚೆನ್ನಾಗಿ ಬೆಂದ ಮೇಲೆ ಕೊತ್ತಂಬರಿ ಸೊಪ್ಪು ನಿಂಬೆರಸ ಹಾಕಿ ಕಲಸಿ.

## ಕ್ಯಾರೆಟ್ ಕಾಯಿರಸ (ಗೊಜ್ಜು)

ಏನೇನು ಬೇಕು?

ಕ್ಯಾರೆಟ್ 3/ ಮೆಂತೆಕಾಳು ಒಂದು ಚಮಚ
ದನಿಯ ಎರಡು ಚಮಚ/ ಜೀರಿಗೆ ಒಂದು ಚಮಚ
ತೆಂಗಿನ ತುರಿ ಕಾಲು ಬಟ್ಟಲು/ಸಾರಿನ ಪುಡಿ ಎರಡು ಚಮಚ
ರುಚಿಗೆ ಉಪ್ಪು, ಬೆಲ್ಲ /ಒಗ್ಗರಣೆಗೆ ಎಣ್ಣೆ, ಸಾಸಿವೆ

ಮಾಡೋದು ಹೇಗೆ?

ಕ್ಯಾರೆಟ್ ಅನ್ನು ಹೋಳು ಹಚ್ಚಿ ಸುಮಾರಾಗಿ ಬೇಯಿಸಿಕೊಳ್ಳಿ. ಮೆಂತೆ ಜೀರಿಗೆ, ದನಿಯಾವನ್ನು ಸ್ವಲ್ಪ ಎಣ್ಣೆಯಲ್ಲಿ ಹುರಿದು ತೆಂಗಿನತುರಿ ಮತ್ತು ಸಾರಿನ ಪುಡಿಯೊಂದಿಗೆ ರುಬ್ಬಿ ಕೊನೆಯಲ್ಲಿ ಕ್ಯಾರೆಟ್ ಹೋಳನ್ನು ಹಾಕಿ ರುಬ್ಬಿ ತೆಗೆಯಿರಿ. ಬಾಣಲೆಗೆ ಎಣ್ಣೆ ಹಾಕಿ ಒಗ್ಗರಣೆ ಮಾಡಿ ಇಂಗು ಹಾಕಿ ರುಬ್ಬಿದ ಮಿಶ್ರಣವನ್ನು ಸೇರಿಸಿ ತಕ್ಕಷ್ಟು ನೀರು ಸೇರಿಸಿ ಉಪ್ಪು ಹಾಕಿ ಕುದಿಸಿದರೆ ರುಚಿಯಾದ ಕಾಯಿರಸ ಸಿದ್ಧ. ಇದು ಅನ್ನದೊಂದಿಗೆ, ಚಪಾತಿಯೊಂದಿಗೆ ಒಳ್ಳೆಯ ಸೈಡ್ ಡಿಶ್ ಆಗುತ್ತದೆ.






GRB®
Sign of purity
www.grbdairyfood.com
ಮರಳು ಮರಳಾಗಿ
ಅಮ್ಮ ಮಾಡಿದ ತುಪ್ಪದ ತರಾನೆ...

ಮರಳು ಮರಳಾದ ಶುದ್ಧ ತುಪ್ಪ ಎಂದಾಗ
GRB ಭಾರತದ ಮನ ಮನೆಗಳಲ್ಲಿ
ಎಲ್ಲರ ನೆಚ್ಚಿನ ಆಯ್ಕೆಯಾಗಿರುವುದರಲ್ಲಿ ಹೆಮ್ಮೆ ಪಡುತ್ತದೆ.
ಭಾರತದ ಸಾಂಪ್ರದಾಯಿಕ ಸ್ವಾದದ ಸಂಕೇತವಾಗಿರುವ GRB,
ಇದೀಗ ಹಲವಾರು ದೇಶಗಳಲ್ಲಿ ಜನಪ್ರಿಯ.
GRB ನಿಜಕ್ಕೂ ಭಾರತದ ಸಾಂಪ್ರದಾಯಿಕ ಸ್ವಾದದ
ಹೆಮ್ಮೆಯ ರಾಯಭಾರಿಯಾಗಿದೆ.
GRB ತುಪ್ಪ ಗುಣಮಟ್ಟ ಮತ್ತು ಶುದ್ಧತೆಯ ಪುರಾವೆಯಾಗಿ
ಕೋಟ್ಯಾಂತರ ಜನರ ನಂಬಿಕೆ ಗಳಿಸಿದೆ.
ಇದರೊಂದಿಗೆ ಇರುವುದು ಮೂರು ತಲೆಮಾರಿನ ಭರವಸೆ!

ಮರಳು ಮರಳಾದ
ಸುವಾಸನೆ ಭರಿತ । ಸವಿಯಾದ ರುಚಿ






ತುಪ್ಪ | ಇನ್‌ಸ್ಟಂಟ್ ಮಿಕ್ಸ್ | ಮಸಾಲಾ ಪುಡಿಗಳು | ಸ್ವೀಟ್ಸ್ | ಐಸ್‌ಕ್ರೀಂ